# ಕರ್ನಾಟಕ ಸರಕಾರದ ನಡುವಳಿಕೆಗಳು

ವಿಷಯ:- ಸಿಂದಗಿ ತಾಲೂಕಿನ ಜಾಲವಾದಿ ಗ್ರಾಮದ ಜಮೀನನ್ನು ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಚಿಮ್ಮಲಗಿ ಪೂರ್ವ ಭಾಗದ ಮುಖ್ಯ ಕಾಲುವೆ ಚೈ. 132.261 ಕಿ.ಮೀ ರಿಂದ 137.124 ಕಿ.ಮೀ. ಒಳಗೆ ಮುಖ್ಯ ಕಾಲುವೆಗೆ ಜಮೀನು ಕಳೆದುಕೊಳ್ಳುವ ಮಾಲೀಕರಿಗೆ ಪುನರವಸತಿ ಮತ್ತು ಪುನರ್ ವ್ಯವಸ್ಥೆಯ ಕರಡು ಯಾದಿಯನ್ನು ಕಾಯ್ದೆ ಕಲಂ 45 ರಡಿ ಪುನರಾವಲೋಕನ ಮಾಡಿ ಕಲಂ 18 ರಡಿ ಅನುಮೋದಿಸುವ ಕುರಿತು.

ಓದಲಾಗಿದೆ: 1} ಭೂಸ್ವಾಧೀನ ಕಾಯ್ದೆ 2013ರ ಕಲಂ 11(1) ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ದಿ: 04-03-2015

2} ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3} ಪುನರ್ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರ ಪತ್ರ ಸಂ. 102 ದಿನಾಂಕ: 12-03-2016.

4}ಮಹಾ ವ್ಯವಸ್ಥಾಪಕರು, ಪುನರ್ವಸತಿ ಮತ್ತು ಪುನರ್ನಿರ್ಮಾಣ, ಕೃ.ಮೇ.ಯೋ. ನವನಗರ, ಬಾಗಲಕೋಟ ಇವರ ಕಲಂ 17(2)ರಡಿ ಶಿಫಾರಸ್ಸು ದಿನಾಂಕ: -05-2016.

-000-

ಆದೇಶ ಸಂ:ಮವ್ಯ/ಕಂಇ/ಪುಪು/ಸಿಆರ್-80/2016-17/70 ದಿನಾಂಕ:28-05-2016.

ಪುನರ್ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಸಿಂದಗಿ ತಾಲೂಕಿನ ಜಾಲವಾದಿ ಗ್ರಾಮದ ಜಮೀನನ್ನು ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಚಿಮ್ಮಲಗಿ ಪೂರ್ವ ಭಾಗದ ಮುಖ್ಯ ಕಾಲುವೆ ಚೈ. 132.261 ಕಿ.ಮೀ ರಿಂದ 137.124 ಕಿ.ಮೀ. ಒಳಗೆ ಮುಖ್ಯ ಕಾಲುವೆಗೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳುತ್ತಿದ್ದು, ಒಟ್ಟು 184ಎ13ಗುಂ. ಕ್ಷೇತ್ರಕ್ಕೆ ನೂತನ ಕಾಯ್ದೆಯ ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರನ್ನು ಈ ಯೋಜನೆಗೆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಹೆಚ್ಚು ಇರುವುದರಿಂದ ಯೋಜನಾ ವ್ಯಾಪ್ತಿಯ ಸಮಿತಿಯನ್ನು ಅಸ್ತಿತ್ವಕ್ಕೆ ತಂದು, ತಯಾರಿಸಲಾದ ಪುನರ್ವಸತಿ ಪುನರ್ವ್ಯವಸ್ಥೆಯ ಕ್ರಿಯಾ ಯೋಜನೆಯನ್ನು ದಿನಾಂಕ 16-04-2016 ರಂದು ಪುನರಾವಲೋಕನ ಮಾಡಿ, ಅನುಮೋದನೆಗೆ ಅಂಗೀಕರಿಸಿರುವುದು.

ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ ಒಟ್ಟು ಕ್ಷೇತ್ರ 184ಎ13ಗುಂ. ಕ್ಷೇತ್ರದಲ್ಲಿ ಬಸವನ ಬಾಗೇವಾಡಿ ಗ್ರಾಮಕ್ಕೆ ಸಂಬಂಧಿಸಿದಂತೆ ಒಟ್ಟು 177 ಕುಟುಂಬಗಳು ಭೂಮಿಯನ್ನು ಕಳೆದುಕೊಳ್ಳುತ್ತಿದ್ದು, ಅದರಲ್ಲಿ 11 ಕುಟುಂಬಗಳು ಅವರು ಹೊಂದಿದ ಕ್ಷೇತ್ರಕ್ಕಿಂತ ಬಹುಪಾಲು ಭೂಮಿಯನ್ನು ಕಳೆದುಕೊಳ್ಳುತ್ತಿದ್ದು, ಅವರ ಜೀವನಾಧಾರ ನಷ್ಟತೆಯನ್ನು ಕಳೆದುಕೊಳ್ಳುವುದರಿಂದ ಅನುಸೂಚಿ-31 2ನೇ ವಿವರ ಪಟ್ಟಿ ಅನುಸಾರ ಜೀವನಾಧಾರ ಸೌಲಭ್ಯವನ್ನು ನೀಡಲು ಪುನರ್ವಸತಿ ಪುನರ್‌ನಿರ್ಮಾಣದ ಕ್ರಿಯಾ ಯೋಜನೆಯನ್ನು ತಯಾರಿಸಿರುತ್ತಾರೆ. ಇನ್ನುಳಿದ ಯಾವುದೇ ಕುಟುಂಬವು ಜೀವನೋಪಾಯಕ್ಕೆ ನಷ್ಟ ಹೊಂದುವುದಿಲ್ಲ ಎಂಬುವುದನ್ನು ಪುನರ್‌ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿರವರು ಕೂಲಂಕುಷವಾಗಿ ಪರಿಶೀಲಿಸಿ ನೂತನ ಕಾಯ್ದೆರಡಿ ಕಲಂ 16(6)ರಡಿ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಕರಡು ಯಾದಿಯನ್ನು ತಯಾರಿಸಿ ದೃಢಪಡಿಸಿಕೊಂಡಿದ್ದಾರೆ.

ಪುನರ್‌ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರು ತಯಾರಿಸಿರುವ ಯಾದಿಯನ್ನು ಶಿಫಾರಸ್ಸುಗಳನ್ನು ಆಧರಿಸಿ, ಹಾಗೂ ಜೀವನೋಪಾಯ ಕಳದುಕೊಳ್ಳುವ ಸಂತ್ರಸ್ಥರು ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಯಲ್ಲಿರುವ ಜಮೀನು ಹೊರತು ಪಡಿಸಿ, ಇತರೆ ಯಾವುದೇ ಪ್ರದೇಶದಲ್ಲಿ ಜಮೀನು ಹೊಂದಿಲ್ಲವೆಂಬುದರ ಬಗ್ಗೆ ಅವರಿಂದ ಶಪತ ಪತ್ರ ಹಾಗೂ ಕಂದಾಯ ದಾಖಲೆ (ಭೂಹಿಡುವಳಿ) ಕಡ್ಡಾಯವಾಗಿ ಪಡೆದುಕೊಂಡು, ಐತೀರ್ಪು ಸಂದರ್ಭದಲ್ಲಿ ಸಲ್ಲಿಸುವುದು. ಅಲ್ಲದೇ, ಈ ಕುರಿತು ಸ್ಥಾನಿಕವಾಗಿ ಪರಿಶೀಲಿಸಿ, ಖಚಿತ ಪಡಿಸಿಕೊಳ್ಳುವುದು. ನೂತನ ಭೂಸ್ವಾಧೀನ ಕಾಯ್ದೆ 2013ರ ಕಲಂ 84 ರನ್ವಯ ಸೌಲಭ್ಯ ಪಡೆಯುವ ಕುಟುಂಬವು ಸುಳ್ಳು ಮಾಹಿತಿ ನೀಡಿದಲ್ಲಿ ಕಲಂ 84 (1) (2) ಹಾಗೂ (3) ರನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಷರತ್ತಿಗೆ ಒಳಪಟ್ಟು ಪುನರ್‌ವ್ಯವಸ್ಥೆ ಯೋಜನೆಯ ಪ್ರಸ್ತಾವನೆಯನ್ನು ನೂತನ ಕಾಯ್ದೆ ಕಲಂ 18ರಡಿ ಅನುಮೋದಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಆಯುಕ್ತರು,
ಪುಪು ಮತ್ತು ಭೂಸ್ವಾಧೀನ, ಕೃಮೇಯೋ,
ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು,
ಕರ್ನಾಟಕ ಸರಕಾರ, ಕಂದಾಯ ಇಲಾಖೆ,
ನವನಗರ, ಬಾಗಲಕೋಟ.

ಇವರಿಗೆ:

1) ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ., ನವನಗರ, ಬಾಗಲಕೋಟ ಇವರಿಗೆ
2) ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
3) ವಿಶೇಷ ಜಿಲ್ಲಾಧಿಕಾರಿಗಳು, ಕೃ.ಮೇ.ಯೋ. ನವನಗರ, ಬಾಗಲಕೋಟ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
4) ಪುನರ್‌ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರಿಗೆ ಸಂಬಂಧಪಟ್ಟ ಕಡತದೊಂದಿಗೆ ಹಿಂದಿರುಗಿಸಲಾಗಿದೆ.
5) ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರಿಗೆ ಸೂಕ್ತ ಕ್ರಮಕ್ಕಾಗಿ
6) ಉಪ ವಿಭಾಗಾಧಿಕಾರಿಗಳು, ಉಪ-ವಿಭಾಗ, ವಿಜಯಪುರ ಇವರಿಗೆ ಮಾಹಿತಿಗಾಗಿ.
7) ತಹಶೀಲ್ದಾರರು ಸಿಂದಗಿ ತಾಲೂಕ ಇವರ ಮಾಹಿತಿಗಾಗಿ.
8) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜಾಲವಾದ ತಾಲೂಕ ಸಿಂದಗಿ ಇವರಿಗೆ.
9) Web site: www.bagalkot.nic.in/ukp. ಅಂತರಜಾಲದಲ್ಲಿ ಅಳವಡಿಸಲು ಸಿಸ್ಟಂ ಮ್ಯಾನೇಜರ್, ಕಂಪ್ಯೂಟರ್ ವಿಭಾಗ, ಪು ಮತ್ತು ಪು, ಕೃಮೇಯೋ, ನವನಗರ, ಬಾಗಲಕೋಟ ಇವರಿಗೆ
10) ಭೂಸ್ವಾಧೀನ ವಿಭಾಗಕ್ಕೆ.